ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಹಿಂದುಳಿದ ಜನಾಂಗಕ್ಕೆ ಕಾರ್ಯಗಾರ ಹಾಗೂ ವಸತಿ ಯೋಜನೆ.

೧೬೪೫ ಶ್ರೀ ಚಂದ್ರಕಾಂತ ಜಿ. ಬೆಲ್ಲದ. (ಧಾರವಾಡ ನಗರ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಮಾಜದ, ಭಜಂತರಿ, ಅಗಸ, ಸಿಂಪಿಗ ಪಂಗಡಕ್ಕೆ ಸೇರಿದ ಜನಾಂಗಕ್ಕೆ ಕಾರ್ಯಾಗಾರ ಹಾಗೂ ವಸತಿ ಒದಗಿಸುವ ಯೋಜನೆ ಏನಾದರೂ ಇದೆಯೆ ?

ಆ) ಈ ಪಂಗಡ ವಸತಿ ಹೀನರನ್ನು ನಗರಗಳಲ್ಲಿ ಹಾಗೂ ಹಳ್ಳಿಗಳಲ್ಲಿ ಗುರುತಿಸಲು ಪ್ರತ್ಯೇಕ ಯೋಜನೆಯನ್ನು ರೂಪಿಸಲಾಗಿದೆಯೇ ? ಹಾಗಿದ್ದಲ್ಲಿ ಅವರ ಸಂಖ್ಯೆ ಎಷ್ಟು ?

ಇ) ಹುಬ್ಬಳ್ಳಿ-ಧಾರವಾಡ ಮಹಾನಗರದ ಸರಹದ್ದಿನಲ್ಲಿ ಇರುವ ಹೊಸ ಬಡಾವಣೆಗಳಲ್ಲಿ ಪ್ರತ್ಯೇಕ ಕಾರ್ಯಾಗಾರ ಹಾಗೂ ವಸತಿ ಕಟ್ಟಿಸಿ ಮಾಸಲಾಗಿಡಲು ಸರ್ಕಾರವು ಆಲೋಚಿಸಿದೆಯೇ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).—

ಅ) ಸಾಮಾನ್ಯ ವಸತಿ ಯೋಜನೆಗಳಾದ ಭಾಗ್ಯ ಮಂದಿರ, ಜನತಾ ವಸತಿ ಯೋಜನೆ, ಪ್ರಾಯೋಗಿಕ ಕಡಿಮೆ ವೆಚ್ಚದ ಮನೆಗಳು ಮುಂತಾದ ಯೋಜನೆಗಳಲ್ಲಿ ಈ ಪಂಗಡಗಳಾದ ಭಜಂತರಿ, ಅಗಸ ಮತ್ತು ಸಿಂಪಗಿ ಜನಾಂಗಕ್ಕೆ ಸೇರಿದ ಯಾವ ವ್ಯಕ್ತಿಯು ಅರ್ಹತೆಯನ್ನು ಹೊಂದುತ್ತಾನೆಯೋ ಅವರಿಗೆ ಮಂಜೂರು ಮಾಡಲಾಗುವುದು. ಆದರೆ, ಪ್ರತ್ಯೇಕವಾಗಿ ಈ ಜನಾಂಗಕ್ಕೆ ವಸತಿ ಯೋಜನೆ ಕೈಗೊಂಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಚಂದ್ರಕಾಂತ್ ಜಿ ಬೆಲ್ಲದ್.—ಅಧ್ಯಕ್ಷರೆ, ನಾನು ಮೊದಲನೇಯ ಪ್ರಶ್ನೆಯಲ್ಲಿ ಕೇಳಿರುವುದು ಭಜಂತರಿ ಎನ್ನುವುದು ಅಲ್ಲ. ನಾನು ಕೇಳಿದ್ದುದು, ಚೌರಿಕ, ಅಗಸ ಮತ್ತು ಸಿಂಪಿಗ ಎಂದು ಈ ಜನಾಂಗಗಳವು ಎನಿದ್ದಾರೆ, ಅವರು ಸಮಾಜಕ್ಕೆ ಸೇವೆ ಮಾಡತಕ್ಕಂಥ ಜನರಾಗಿದ್ದಾರೆ. ಅವರು ಬಹಳ ಕಷ್ಟ ಪರಿಸ್ಥಿತಿಯಲ್ಲಿರತಕ್ಕಂಥ ಜನರಾಗಿದ್ದಾರೆ. ಆದುದರಿಂದ ಆ ವರ್ಗದ ಜನರಿಗೆ ಶಹರು ಪ್ರದೇಶಗಳಲ್ಲಿ ನಿವೇಶನ ಅಥವಾ ಕಾರ್ಯಾಗಾರವನ್ನು ವ್ಯವಸ್ಥೆ ಮಾಡಿಕೊಡುವುದಕ್ಕೆ ವಿಚಾರಿಸು ಮಾಡಿದ್ದೀರಾ ? ಏಕೆಂದರೆ ನಗರ ಪ್ರದೇಶಗಳು ಬೆಳೆಯುತ್ತಾ ಇವೆ, ಆದುದರಿಂದ ಹಿಂದುಳಿದ ಮತ್ತು ಸಮಾಜದ ಎಲ್ಲಾ ಜನರ ಸೇವೆಯನ್ನು ಮಾಡುವಂತಹ ಈ ವರ್ಗಗಳವರಿಗೆ ಸಹಾಯ ಮಾಡುವ ಯೋಜನೆ ಏನಾದರೂ ಇದೆಯೇ ಎಂದು ಕೇಳಿದ್ದೇನೆ.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಅಧ್ಯಕ್ಷರೆ, ಈ ಪ್ರಶ್ನೆಯಲ್ಲಿ ಭಜಂತ್ರಿ, ಅಗಸ, ಸಿಂಪಿಗ ಎಂದು ಇದೆ. ಆದಕ್ಕೋಸ್ಕರವಾಗಿ ಹೇಳಿದ್ದೇನೆ. ಆದರೆ ಇಂಥ ಪಂಗಡಗಳಿಗಾಗಿಯೇ ಪ್ರತ್ಯೇಕವಾದ ಯೋಜನೆಗಳು ಯಾವುವೂ ಇಲ್ಲ. ಹಾಲಿ ಇರುವ ಸ್ಕೀಮ್‌ಗಳಲ್ಲಿ ಇವರೂ ಕೂಡ ಅರ್ಜಿ ಹಾಕಿಕೊಂಡರೆ ಇವರಿಗೂ ವಸತಿ ನಿವೇಶನಗಳು ಸಿಗುವ ಅವಕಾಶಗಳು ಇವೆ.

ಶ್ರೀ ಚಂದ್ರಕಾಂತ ಜಿ ಬೆಲ್ಲದ್.—ನಗರ ಪ್ರದೇಶಗಳಲ್ಲಿ ಇಂತಹ ಯೋಜನೆಗಳು ಇವೆಯೇ ಎಂದು ಕೇಳಿದ್ದೇನೆ.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ನಗರ ಪ್ರದೇಶಗಳಲ್ಲಿಯೂ ಸಹ ವರ್ತುಲ ರೈಲಿನಲ್ಲಿ ಯಾರಿದ್ದಾರೆ ಅವರು ಈ ಸ್ಕೀಮ್‌ಗಳ ಕೆಳಗಡೆ ಸೌಲಭ್ಯಗಳನ್ನು ಪಡೆಯಲು ಅವಕಾಶ ಇದೆ.